**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

ಸೆಷನ್ಸ್ ಕೇಸ್ ನಂಬ್ರ **5/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ರೋಹಿತ್ ಕುಮಾರ್ ಶೆಟ್ಟಿ | ಪ್ರಾ.ಸಾಃ 11 |
| ತಂದೆಯ ಹೆಸರು | : | ರಾಜು ಶೆಟ್ಟಿ | ಚಾ.ಸಾಃ 21 |
| ಪ್ರಾಯ | : | 42 ವರ್ಷ | **ದಿನಾಂಕಃ 22.08.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವ್ಯವಹಾರ | |
| ವಾಸಸ್ಥಳ | : | ಬೈಲಬೀಡು, ಕುಕ್ಕೆಹಳ್ಳಿ ಗ್ರಾಮ, ಉಡುಪಿ ತಾಲೂಕು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಉಡುಪಿಯ GIZMO ಎಂಬ ಕಂಪ್ಯೂಟರ್ ಸೇಲ್ಸ್ ಅಂಡ್ ಸರ್ವೀಸ್ ವ್ಯವಹಾರ ನಡೆಸುತ್ತಿದ್ದೇನೆ. ಚಾ.ಸಾ.22 ನನ್ನ ಸದರಿ ಸಂಸ್ಥೆಯ ಪಾಲುದಾರರಾಗಿರುತ್ತಾರೆ. ಚಾ.ಸಾ.22ರವರ ಬಳಿ ಹೋಂಡಾ ಡ್ರೀಮ್ ಯುಗ ದ್ವಿಚಕ್ರ ವಾಹನ ಸಂಖ್ಯೆ ಕೆಎ-20-ಇಇ-0610 ಇದೆ. ಸದರಿ ವಾಹನವನ್ನು ನಾವು ಮತ್ತು ನಮ್ಮ ಸಿಬ್ಬಂದಿಗಳು ಸಂಸ್ಥೆಯ ಸರ್ವೀಸ್ ಕೆಲಸಕ್ಕೆ ಉಪಯೋಗಿಸುತ್ತಿದ್ದೇವೆ.

2. ಚಾ.ಸಾ.22ರವರು ಸೆಪ್ಟೆಂಬರ್-2023ರ ಮೊದಲ ವಾರದಲ್ಲಿ ಕಂಪೆನಿ ಕೆಲಸದ ಬಗ್ಗೆ ಬೆಂಗಳೂರಿಗೆ ಹೋಗಿದ್ದು, ದಿನಾಂಕಃ 16.09.2023 ರಂದು ರಾತ್ರಿ 8.00 ಗಂಟೆ ಸುಮಾರಿಗೆ ನಮ್ಮ ಶೋ ರೂಮ್ ಬಂದ್ ಮಾಡಿ ಹೋಗುವಾಗ ಮೇಲೆ ತಿಳಿಸಿದ ಮೋಟಾರ್ ಸೈಕಲನ್ನು ನಮ್ಮ ಶೋ ರೂಮ್ ಎದುರುಗಡೆ ಲಾಕ್ ಮಾಡಿ

ನಿಲ್ಲಿಸಿದ್ದೆವು. ಮರುದಿನ ದಿನಾಂಕಃ 17.09.2023 ರಂದು ಬೆಳಿಗ್ಗೆ 9.45 ಗಂಟೆಗೆ ನಾನು ಶೋ ರೂಮ್ ತೆರೆಯಲು ಬಂದಾಗ ರಾತ್ರಿ ನಿಲ್ಲಿಸಿದ್ದ ಸ್ಥಳದಲ್ಲಿ ನಮ್ಮ ಮೋಟಾರ್ ಸೈಕಲ್ ಇರಲಿಲ್ಲ. ನಾನು ಎಲ್ಲಾ ಕಡೆ ಹುಡುಕಾಡಿ, ನಂತರ ಚಾ.ಸಾ.22ರವರಿಗೆ ವಿಷಯವನ್ನು ತಿಳಿಸಿ ಮರುದಿನ ಮಧ್ಯಾಹ್ನ 2.00 ಗಂಟೆಗೆ ಉಡುಪಿ ನಗರ ಪೊಲೀಸು ಠಾಣೆಗೆ ದೂರು ನೀಡಿರುತ್ತೇನೆ.

4. ನಂತರ ದಿನಾಂಕಃ 15.10.2023 ರಂದು ಮುಲ್ಕಿ ಪೊಲೀಸರು ನನಗೆ ಮತ್ತು ಚಾ.ಸಾ.22ರವರಿಗೆ ಫೋನ್ ಮಾಡಿ ಪೊಲೀಸು ಠಾಣೆಗೆ ಬರಲು ಹೇಳಿದರು. ನಾನು ಮತ್ತು ಚಾ.ಸಾ.22 ಮುಲ್ಕಿ ಪೊಲೀಸು ಠಾಣೆಗೆ ಹೋದಾಗ ಚಾ.ಸಾ.22ರವರ ದ್ವಿಚಕ್ರ ವಾಹನ ಅಲ್ಲಿತ್ತು. ನಾವು ಅದನ್ನು ಗುರುತಿಸಿರುತ್ತೇವೆ. ಸದರಿ ದ್ವಿಚಕ್ರ ವಾಹನವನ್ನು ಒಂದು ಮಹಿಳೆಯ ಕರಿಮಣಿ ಸರ ದರೋಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಳಸಲಾಗಿದೆ ಎಂದು ಪೊಲೀಸರಿಂದ ತಿಳಿದು ಬಂತು. ನಂತರ ಚಾ.ಸಾ.22ರವರು ಅವರ ವಾಹನವನ್ನು ಮೂಡಬಿದ್ರೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ದ್ವಿಚಕ್ರ ವಾಹನವನ್ನು ಅವರ ವಶಕ್ಕೆ ಪಡೆದಿರುತ್ತಾರೆ.

5. ನಾನು ಪೊಲೀಸರಿಗೆ ನೀಡಿದ ದೂರನ್ನು ಈಗ ನೋಡುತ್ತಿದ್ದು, ಅದರ ಯಥಾಪ್ರತಿಯನ್ನು ನಿ.ಪಿ.25 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇದೆ.

6. ಸದರಿ ಪ್ರಕರಣದಲ್ಲಿ ನಾನು ನನ್ನ ಹೇಳಿಕೆ ನೀಡಿರುತ್ತೇನೆ. ಚಾ.ಸಾ.22ರವರ ವಾಹನದ ಫೋಟೋ ನೋಡಿದರೆ ಗುರುತಿಸಬಲ್ಲೆ. ಈಗ

ನೋಡುತ್ತಿರುವ ಫೋಟೋ ಚಾ.ಸಾ.22ರವರ ವಾಹನದ್ದಾಗಿದ್ದು, ಸದರಿ 4 ಫೋಟೋಗಳನ್ನು ಒಟ್ಟಾಗಿ ನಿ.ಪಿ.26(4) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ **3** ಮತ್ತು **5**ನೇ ಆರೋಪಿ ಪರ ಶ್ರೀ ವಿ.ಆರ್.ಎ. ವಕೀಲರಿಂದ ಮತ್ತು **1, 2** ಮತ್ತು **6**ನೇ ಆರೋಪಿತರ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಶ್ರೀ ಜಿ.ವಿ.ಜಿ. ವಕೀಲರಿಂದಃ</u>

(1 ರಿಂದ 6ನೇ ಆರೋಪಿತರ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.)

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.